# ಕರ್ನಾಟಕ ವಿಧಾನಪರಿಷತ್ತು

## ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ-72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-

### ಪ್ರಶ್ನೆ:

ಮಂಗಳೂರು ಮಹಾನಗರಪಾಲಿಕೆಯನ್ನು ಬೃಹತ್ ಮಹಾನಗರಪಾಲಿಕೆಯನ್ನಾಗಿ ಮಾರ್ಪಾಡಿಸಲು ಮತ್ತು ನಗರಪಾಲಿಕೆಯಲ್ಲಿ ಬಾಕಿ ಉಳಿದಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

### ಉತ್ತರ

ಮಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರಪಾಲಿಕೆಯನ್ನಾಗಿ ಮಾರ್ಪಾಡಿಸಲು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಮಂಗಳೂರು ಮಹಾನಗರಪಾಲಿಕೆಯಲ್ಲಿ ಅನುಷ್ಠಾಗೊಳಿಸುತ್ತಿರುವ ಯೋಜನೆಯ ವಿವರಗಳು ಈ ಕೆಳಕಂಡಂತಿದೆ.

**1) ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ:**

ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಈ ಕೆಳಗಿನಂತೆ ಕಾಮಗಾರಿಯು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಉಳಿದ ಮೊತ್ತ ರೂ.506.00ಲಕ್ಷಗಳ 01 ಕಾಮಗಾರಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಗಳೂರು ಮಹಾನಗರಪಾಲಿಕೆಯು ಸಲ್ಲಿಸಬೇಕಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

| ಯೋಜನೆ | ಹಂಚಿಕೆ ಮೊತ್ತ | ಯೋಜನಾ ವರದಿಯ ಒಟ್ಟು ಅನುಮೋದಿತ ಅಂದಾಜು ಮೊತ್ತ | ಖರ್ಚಾಗಿರುವ ಅನುದಾನದ ಮೊತ್ತ | ಅನುಮೋದನೆಯಾದ ಒಟ್ಟು ಕಾಮಗಾರಿಗಳ ಸಂಖ್ಯೆ | ಟೆಂಡರ್ ಕರೆಯಬೇಕಾಗಿರುವ ಕಾಮಗಾರಿಗಳ ಸಂಖ್ಯೆ | ಮುಕ್ತಾಯಗೊಂಡಿರುವ ಕಾಮಗಾರಿಗಳು | ಪ್ರಗತಿಯಲ್ಲಿ ಇರುವ ಕಾಮಗಾರಿಗಳು ಸಂಖ್ಯೆ |
|---|---|---|---|---|---|---|---|
| MGNVY | 12500.00 | 10500.00 (84%) | 3050.00 | 71 | 1* | 27 | 43 |
| MGNVY (Incentive Grant ) | | 2300.00 | 500.00 | 5 | 0 | 5 | 0 |
| ಒಟ್ಟು ಮೊತ್ತ | 12500.00 | 12800.00 | 3550.00 | 76 | 1 | 32 | 43 |

* ಮಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ ಕಟ್ಟಡ ನಿರ್ಮಾಣ ಕಾಮಗಾರಿ.

**2) 15ನೇ ಹಣಕಾಸು ಆಯೋಗದ ಅನುದಾನದ ವಿವರ:**

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನದಡಿ (2021-22 ರಿಂದ 2023-24 ವರೆಗೆ) ಈ ಕೆಳಗಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

| ಅನುದಾನ ವಿವರ | | | | | ಕಾಮಗಾರಿ ವಿವರ | | | | |
|---|---|---|---|---|---|---|---|---|---|
| ಅನುದಾನ ಹಂಚಿಕೆ | ಅನುದಾನ ಬಿಡುಗಡೆ | ಬಿಡುಗಡೆಗೊಳಿಸಬೇಕಾದ ಬಾಕಿ ಅನುದಾನ | ವೆಚ್ಚ ವಾದ ಅನುದಾನ | ವೆಚ್ಚವಾಗದೆ ಉಳಿಕೆ ಅನುದಾನ | ಒಟ್ಟು ಕಾಮಗಾರಿಗಳು ಸಂಖ್ಯೆ | ಪ್ರಗತಿಯಲ್ಲಿ ಇರುವ ಕಾಮಗಾರಿಗಳು ಸಂಖ್ಯೆ | ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳು ಸಂಖ್ಯೆ | ಟೆಂಡರ್ ಕರೆಯಬೇಕಾದ ಕಾಮಗಾರಿಗಳು ಸಂಖ್ಯೆ | ಪೂರ್ಣಗೊಂಡ ಕಾಗಾರಿಗಳು ಸಂಖ್ಯೆ |
| 8520.00* | 6696.00 | 1824.00 | 3784.34 | 2911.66 | 294 | 53 | 15 | 9 | 217 |

*2021-22 ನೇ ಸಾಲಿನ Milion Plus Cities ಅನುದಾನ ಒಳಗೊಂಡಂತೆ

3) **<u>ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ:</u>**

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ಸಂಸ್ಥೆ(ಕೆ.ಯು.ಐ.ಡಿ.ಎಫ್.ಸಿ) ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನಡಿ ಸರ್ಕಾರದ ಆದೇಶ ಸಂಖ್ಯೆ: ನಅಇ 446 ಪಿಆರ್‌ಜೆ 2014, ದಿನಾಂಕ: 14.12.2016 ರಂತೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್) 'ಜಲಸಿರಿ' ಯಡಿ ರಾಜ್ಯದ ಆಯ್ದ ಎಂಟು (08) ಪಟ್ಟಣ/ನಗರಗಳಲ್ಲಿ 24/7 ಕುಡಿಯುವ ನೀರು ಸರಬರಾಜು ಕಾಮಗಾರಿ ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕ್ವಿಮಿಪ್ ಕಾರ್ಯಕ್ರಮವನ್ನು 2 ಟ್ರ್ಯಾಂಚ್‌ಗಳಾಗಿ ವಿಭಾಗಿಸಲಾಗಿದ್ದು, ಟ್ರ್ಯಾಂಚ್-1 ರಲ್ಲಿ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ಪಟ್ಟಣ/ನಗರಗಳನ್ನು ಒಳಗೊಂಡಿರುತ್ತದೆ. ಟ್ರ್ಯಾಂಚ್-2ರಲ್ಲಿ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ಪಟ್ಟಣ/ನಗರಗಳು ಒಳಗೊಂಡಿರುತ್ತದೆ.

ಮಂಗಳೂರು ನಗರದಲ್ಲಿ ಕ್ವಿಮಿಪ್ ಕಾರ್ಯಕ್ರಮದಡಿ ಎಡಿಬಿ ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನಡಿ 02 ಸಗಟು/ಕುಡಿಯುವ ನೀರು ಸರಬರಾಜು ಕಾಮಗಾರಿ ಮತ್ತು 08 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕೆಳಗಿನ 01 ಸಗಟು ನೀರು ಸರಬರಾಜು ಕಾಮಗಾರಿ ಮತ್ತು 03 ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

**ಪೂರ್ಣಗೊಂಡ ಕಾಮಗಾರಿಗಳು:**

1) ಸಗಟು ನೀರು ಸರಬರಾಜು ಕಾಮಗಾರಿ: ಮಂಗಳೂರು ನಗರದ ರಾಮಲಕಟ್ಟೆ ಪ್ರದೇಶದಲ್ಲಿ 20 ಎಂ.ಎಲ್.ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಯನ್ನು ರೂ.33.27ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು ದಿನಾಂಕ:31.03.2024 ರಂದು ಪೂರ್ಣಗೊಂಡಿರುತ್ತದೆ.

2) ಮಂಗಳೂರು ನಗರದ ಸೂರತ್ಕಲ್ ವಲಯ ಒಳಗೊಂಡಂತೆ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿ: ಕಾಮಗಾರಿಯಲ್ಲಿ 27.4ಕಿ.ಮೀ ಒಳಚರಂಡಿ ಜಾಲ, 1569 ಸಂಖ್ಯೆ ಮ್ಯಾನ್ ಹೋಲ್‌ಗಳು ಮತ್ತು 2.93 ಕಿ.ಮೀ. ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ರೂ.90.19ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು ದಿನಾಂಕ:31.03.2023 ರಂದು ಪೂರ್ಣಗೊಳಿಸಲಾಗಿರುತ್ತದೆ.

3) ಮಂಗಳೂರು ನಗರದ ವಲಯ 3&5 ರಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ಮಾಣ ಕಾಮಗಾರಿ: ಕಾಮಗಾರಿಯಲ್ಲಿ 13.93 ಕಿ.ಮೀ ಒಳಚರಂಡಿ ಜಾಲ, 503 ಸಂಖ್ಯೆ ಮ್ಯಾನ್ ಹೋಲ್‌ಗಳು ಮತ್ತು 34 ಸಂಖ್ಯೆ Inspection chambers ಒಳಗೊಂಡಿದ್ದು, ಕಾಮಗಾರಿಯನ್ನು ರೂ.23.97ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು ದಿನಾಂಕ:30.06.2024 ರಂದು ಪೂರ್ಣಗೊಂಡಿರುತ್ತದೆ.

4) **ಮಂಗಳೂರು ಒಳಚರಂಡಿ ಪಂಪಿಂಗ್ ಮೈನ್:** ಕಾಮಗಾರಿಯಲ್ಲಿ 11.04 ಕಿ.ಮೀ ಒಳಚರಂಡಿ ಜಾಲ ಒಳಗೊಂಡಿದ್ದು, ಕಾಮಗಾರಿಯನ್ನು ರೂ.87.71 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು ದಿನಾಂಕ:27.07.2021 ರಂದು ಪೂರ್ಣಗೊಂಡಿರುತ್ತದೆ.

**ಪ್ರಗತಿಯಲ್ಲಿರುವ ಕಾಮಗಾರಿಗಳು:**

ಈ ಕೆಳಗಿನ 01 ನೀರು ಸರಬರಾಜು ಕಾಮಗಾರಿ ಮತ್ತು 05 ಒಳಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

**ನೀರು ಸರಬರಾಜು ಕಾಮಗಾರಿಗಳು**

1) **24/7 ನಿರಂತರ ನೀರು ಸರಬರಾಜು ಕಾಮಗಾರಿ (8 ವರ್ಷಗಳ ಕಾರ್ಯಾಚರಣೆ & ನಿರ್ವಹಣೆ):** ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 24.12.2019 ರಂದು ಮೆ. ಸೂಯೆಜ್ ಪ್ರೈ.ಲಿ. ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ. 617.22ಕೋಟಿಗಳು. ಕಾಮಗಾರಿಯನ್ನು 31.12.2025ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ – ಒಟ್ಟು 1342 ಕಿ.ಮೀಗಳಲ್ಲಿ 744 ಕಿ.ಮೀ ಪೈಪ್ ಲೈನ್ ಅಳವಡಿಸಲಾಗಿರುತ್ತದೆ.
- ಗೃಹ ಸಂಪರ್ಕ – ಒಟ್ಟು 96300 ಸಂಖ್ಯೆಗಳಲ್ಲಿ 21378 ಸಂಖ್ಯೆಗಳಷ್ಟು ಗೃಹ ಸಂಪರ್ಕ ಕಲ್ಪಿಸಲಾಗಿದೆ.
- ಮೇಲ್ಮಟ್ಟದ ಜಲಸಂಗ್ರಹಗಾರ (ಒಹೆಚ್‌ಟಿ) – ಒಟ್ಟು 19 ಸಂಖ್ಯೆಗಳಲ್ಲಿ 03 ಒಹೆಚ್ ಟಿ ಪೂರ್ಣಗೊಂಡಿದ್ದು ಉಳಿದ 16 ಒಹೆಚ್‌ಟಿಗಳು ಪ್ರಗತಿಯಲ್ಲಿದ್ದು ಒಟ್ಟು ಶೇ. 89% ರಷ್ಟು ಪ್ರಗತಿ ಸಾಧಿಸಲಾಗಿದೆ.
- ನೆಲಮಟ್ಟದ ಜಲಸಂಗ್ರಹಗಾರ (ಜಿಎಲ್‌ಎಸ್‌ಆರ್) – ಒಟ್ಟು 05 ಜಿಎಲ್‌ಎಸ್‌ಆರ್ ಗಳಲ್ಲಿ 01 ಜಿಎಲ್‌ಎಸ್‌ಆರ್ ಪೂರ್ಣಗೊಂಡಿದ್ದು ಉಳಿದ 04 ಜಿಎಲ್‌ಎಸ್‌ಆರ್ ಗಳು ಪ್ರಗತಿಯಲ್ಲಿದ್ದು ಒಟ್ಟು ಶೇ. 85% ರಷ್ಟು ಪ್ರಗತಿ ಸಾಧಿಸಲಾಗಿದೆ.
- ಅಡ್ಯಾರ್ ಬಳಿ ನೀರು ಶುದ್ಧೀಕರಣ ಘಟಕ – ದಿನಾಂಕ: 02.01.2024 ರಂದು ಅನುಮೋದನೆ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- ಭೌತಿಕ ಪ್ರಗತಿ: 50%
- ಆರ್ಥಿಕ ಪ್ರಗತಿ: 61.61% (ರೂ.380.29 ಕೋಟಿಗಳು)

**ಒಳಚರಂಡಿ ಕಾಮಗಾರಿಗಳು**:

1) **ಮಂಗಳೂರು ನಗರದ ವಲಯ 9,12 & 13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿ** : ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 28.01.2020 ರಂದು ಮೆ. ಸಿಂಪ್ಲೆಕ್ಸ್ ಪ್ರೈ.ಲಿ., ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ.23.59ಕೋಟಿಗಳು. ಕಾಮಗಾರಿಯನ್ನು 30.09.2024ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ -20.59ಕಿ.ಮೀ ಒಳಚರಂಡಿ ಜಾಲದಲ್ಲಿ 17.27 ಕಿ.ಮೀ ಪೂರ್ಣಗೊಳಿಸಲಾಗಿರುತ್ತದೆ.
- ಮ್ಯಾನ್ ಹೋಲ್ ನಿರ್ಮಾಣ-722 ಸಂಖ್ಯೆಗಳಲ್ಲಿ 636 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಇನ್ಸ್‌ಪೆಕ್ಷನ್ ಚೆಂಬರ್ ನಿರ್ಮಾಣ- 354 ಸಂಖ್ಯೆಗಳಲ್ಲಿ 301 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಭೌತಿಕ ಪ್ರಗತಿ: 82%
- ಆರ್ಥಿಕ ಪ್ರಗತಿ: 90% (ರೂ. 21.26 ಕೋಟಿಗಳು)

**2) ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿಯು (ವಲಯ 1,4 & 7):** ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 16.02.2023 ರಂದು ಮೆ. ಕೆ.ಬಿ.ಆರ್ ಪ್ರೈ.ಲಿ., ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ 30.59 ಕೋಟಿಗಳು. ಕಾಮಗಾರಿಯನ್ನು 15.08.2024 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ -8.68 ಕಿ.ಮೀ ಒಳಚರಂಡಿ ಜಾಲದಲ್ಲಿ 4.49 ಕಿ.ಮೀ ಪೂರ್ಣಗೊಳಿಸಲಾಗಿರುತ್ತದೆ.
- ಮ್ಯಾನ್ ಹೋಲ್ ನಿರ್ಮಾಣ-342 ಸಂಖ್ಯೆಗಳಲ್ಲಿ 213 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಇನ್ಸ್‌ಪೆಕ್ಷನ್ ಚೆಂಬರ್ ನಿರ್ಮಾಣ- 325 ಸಂಖ್ಯೆಗಳಲ್ಲಿ 02 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ವೆಟ್ ವೆಲ್ (01 ಸಂಖ್ಯೆ): ಕಾಮಗಾರಿ ಪ್ರಗತಿಯಲ್ಲಿರುತ್ತದೆ.
- ಭೌತಿಕ ಪ್ರಗತಿ: 43%
- ಆರ್ಥಿಕ ಪ್ರಗತಿ: 37% (ರೂ. 11.48 ಕೋಟಿಗಳು)

3) **ಮಂಗಳೂರು ನಗರದ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿಯನ್ನು (ವಲಯ7)** : ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 16.02.2023 ರಂದು ಮೆ.ಕೆ.ಬಿ.ಆರ್ ಪ್ರೈ.ಲಿ., ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ.22.65 ಕೋಟಿಗಳು. ಕಾಮಗಾರಿಯನ್ನು 15.08.2024ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ -12.68 ಕಿ.ಮೀ ಒಳಚರಂಡಿ ಜಾಲದಲ್ಲಿ 5.79 ಕಿ.ಮೀ ಪೂರ್ಣಗೊಳಿಸಲಾಗಿರುತ್ತದೆ.
- ಮ್ಯಾನ್ ಹೋಲ್ ನಿರ್ಮಾಣ-578 ಸಂಖ್ಯೆಗಳಲ್ಲಿ 299 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಇನ್ಸ್‌ಪೆಕ್ಷನ್ ಚೆಂಬರ್ ನಿರ್ಮಾಣ- 550 ಸಂಖ್ಯೆಗಳಲ್ಲಿ 04 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಭೌತಿಕ ಪ್ರಗತಿ: 46%
- ಆರ್ಥಿಕ ಪ್ರಗತಿ: 42% (ರೂ.9.46 ಕೋಟಿಗಳು)

**4) ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿಯು (ವಲಯ 3&5)** : ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 17.02.2023 ರಂದು ಮೆ. ಸಿ.ವಿ.ಕೆ. ಪ್ರೈ.ಲಿ., ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ 19.05 ಕೋಟಿಗಳು. ಕಾಮಗಾರಿಯನ್ನು 16.08.2024 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ -12.15 ಕಿ.ಮೀ ಒಳಚರಂಡಿ ಜಾಲದಲ್ಲಿ 10.46 ಕಿ.ಮೀ ಪೂರ್ಣಗೊಳಿಸಲಾಗಿರುತ್ತದೆ.
- ಮ್ಯಾನ್ ಹೋಲ್ ನಿರ್ಮಾಣ - 424 ಸಂಖ್ಯೆಗಳಲ್ಲಿ 414 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.

- ಇನ್ಸ್‌ಪೆಕ್ಷನ್ ಚೆಂಬರ್ ನಿರ್ಮಾಣ- 110 ಸಂಖ್ಯೆಗಳಲ್ಲಿ 12 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- ಭೌತಿಕ ಪ್ರಗತಿ: 65%
- ಆರ್ಥಿಕ ಪ್ರಗತಿ: 63% (ರೂ. 11.98 ಕೋಟಿಗಳು)

5) ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿಯ ವಲಯ 12ರ MSEZ R&R colony ಕಾಲೋನಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿ: ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 17.02.2023 ರಂದು ಮೆ. ಸಿ.ವಿ.ಕೆ. ಪ್ರೆÉ.ಲಿ. ರವರಿಗೆ ನೀಡಲಾಗಿರುತ್ತದೆ. ಕಾಮಗಾರಿಯ ಗುತ್ತಿಗೆ ಮೊತ್ತ ರೂ 15.63 ಕೋಟಿಗಳು. ಕಾಮಗಾರಿಯನ್ನು 16.02.2025ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಪೈಪ್ ಲೈನ್ –4.41 ಕಿ.ಮೀ ಒಳಚರಂಡಿ ಜಾಲದಲ್ಲಿ 3.23ಕಿ.ಮೀ ಪೂರ್ಣಗೊಳಿಸಲಾಗಿರುತ್ತದೆ.
- ಮ್ಯಾನ್ ಹೋಲ್ ನಿರ್ಮಾಣ -15 ಸಂಖ್ಯೆಗಳಲ್ಲಿ 04 ಸಂಖ್ಯೆಗಳು ಪೂರ್ಣಗೊಂಡಿರುತ್ತವೆ.
- 03 ವೆಟ್ ವೆಲ್ (ಕೊಡಿಕೆರೆ-02 ಸಂಖ್ಯೆ, ತಿರುವೆಲ್-01 ಸಂಖ್ಯೆ): ಕಾಮಗಾರಿ ಪ್ರಗತಿಯಲ್ಲಿದ್ದು ಶೇ.57 ರಷ್ಟು ಪೂರ್ಣಗೊಂಡಿರುತ್ತದೆ.
- ತ್ಯಾಜ್ಯ ನೀರು ಶುದ್ಧೀಕರಣ ಘಟಕ (ಕೊಡಿಕೆರೆ:1.5 ಎಂಎಲ್‌ಡಿ): ಕಾಮಗಾರಿ ಪ್ರಗತಿಯಲ್ಲಿದ್ದು ಶೇ.45ರಷ್ಟು ಪೂರ್ಣಗೊಂಡಿರುತ್ತದೆ.
- ಭೌತಿಕ ಪ್ರಗತಿ: 45%
- ಆರ್ಥಿಕ ಪ್ರಗತಿ: 45% (ರೂ.7.07 ಕೋಟಿಗಳು)

4) **<u>ಕೇಂದ್ರ ಪುರಸ್ಕೃತ</u> ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ:**

1) ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ಸ್ವಚ್ಛ ಭಾರತ್ ಅಭಿಯಾನ 1.0 ಯೋಜನೆಯಡಿಯಲ್ಲಿ ಈ ಕೆಳಗಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

| ವಿಸ್ತೃತ ಯೋಜನಾ ವರದಿ ವಿವರ | ಯೋಜನಾ ವರದಿಯ ಒಟ್ಟು ಅನುಮೋದಿತ ಮೊತ್ತ | ಅನುಮೋದನೆ ಆದ ಒಟ್ಟು ಕಾಮಗಾರಿಗಳ ಸಂಖ್ಯೆ | ಟೆಂಡರ್ ಹಂತದಲ್ಲಿರುವ ಕಾಮಗಾರಿಗಳ ಸಂಖ್ಯೆ | ಟೆಂಡರ್ ಕರೆಯಬೇಕಿರುವ ಕಾಮಗಾರಿಗಳ ಸಂಖ್ಯೆ | ಮುಕ್ತಾಯಗೊಂಡಿರುವ ಕಾಮಗಾರಿಗಳು | ಖರ್ಚಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ಮೊತ್ತ |
|---|---|---|---|---|---|---|
| ಘನತ್ಯಾಜ್ಯ ಸಂಸ್ಕರಣೆ | 1256.00 | 24 | 01 | - | 23 | 732.25 |
| ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆ | 2715.00 | 17 | - | 02 | 15 | 1583.83 |

2) ಸ್ವಚ್ಛ ಭಾರತ್ ಅಭಿಯಾನ 2.0 ಯೋಜನೆಯಡಿಯಲ್ಲಿ ಈ ಕೆಳಗಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

| ವಿಸ್ತೃತ ಯೋಜನಾ ವರದಿ ವಿವರ | ಯೋಜನಾ ವರದಿಯ ಒಟ್ಟು ಅನುಮೋದಿತ ಮೊತ್ತ | ಷರಾ |
|---|---|---|
| Material Recovery Facility (MRF) | 1104.00 | ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯು ದಿನಾಂಕ:30/05/2024 ರಂದು ಅನುಮೋದನೆಗೊಂಡಿದ್ದು, ಜಿಲ್ಲಾಧಿಕಾರಿಯವರಿಂದ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |

| | | |
|---|---|---|
| Legacy Waste Management | 5638.00 | ಸದರಿ ಕಾಮಾಗಾರಿಯು ಪ್ರಗತಿಯಲ್ಲಿರುತ್ತದೆ. |

## 5) ಎಸ್ ಎಫ್‌ಸಿ ವಿಶೇಷ ಅನುದಾನ (2019-20 ರಿಂದ 2022-23)ದ ವಿವರ:

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಎಸ್‌ಎಫ್‌ಸಿ ವಿಶೇಷ ಅನುದಾನದಡಿ ರೂ.6500.00ಲಕ್ಷಗಳಲ್ಲಿ ಸುರತ್ಕಲ್ ಮಾರುಕಟ್ಟೆ ನಿರ್ಮಾಣ ಕಾಮಗಾರಿಯ ಆರ್ಥಿಕ ಬಿಡ್‌ಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.

ಮುಂದುವರೆದು, ಮಂಗಳೂರು ಮಹಾನಗರಪಾಲಿಕೆಗೆ ಎಸ್.ಎಫ್.ಸಿ ವಿಶೇಷ ಅನುದಾನ 2019-20ನೇ 2021-22ನೇ ಹಾಗೂ 2022-23ನೇ ಸಾಲಿನಲ್ಲಿ ಈ ಕೆಳಗಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**(ರೂ.ಲಕ್ಷಗಳಲ್ಲಿ)**

| SL. NO | GO's & Head of account | YEAR | Allocation | Release | Exp | Total Approved Works | Completed Works | Works Started/ Ongoing | Under Tender Process/ Tender to be Invited |
|---|---|---|---|---|---|---|---|---|---|
| 1 | ಸರ್ಕಾರದ ಆದೇಶ ಸಂಖ್ಯೆ ನಅಇ:219ಎಸ್‌ಎಫ್‌ಸಿ: 2019 ದಿನಾಂಕ: 07.09.2019 | 2019-20 | 2500.00 | 2286.48 | 2253.21 | 477 | 456 | 19 | 2 |
| 2 | | 2020-21 | 0.00 | 0.00 | 0.00 | 0 | 0 | 0 | 0 |
| 3 | ಸರ್ಕಾರದ ಆದೇಶ ಸಂಖ್ಯೆ ನಅಇ:238:ಎಸ್‌ಎಫ್‌ಸಿ: 2021 ದಿನಾಂಕ:02.11.2021 | 2021-22 | 1500.00 | 556.96 | 563.72 | 166 | 71 | 80 | 15 |
| 4 | ಸರ್ಕಾರದ ಆದೇಶ ಸಂಖ್ಯೆ ನಅಇ:310ಎಸ್‌ಎಫ್‌ಸಿ: 2022 ದಿನಾಂಕ:05.12.2022 | 2022-23 | 2000.00 | 15.40 | 25.75 | 187 | 1 | 62 | 124 |
| | ಸರ್ಕಾರದ ಆದೇಶ ಸಂಖ್ಯೆ ನಅಇ:188ಎಸ್‌ಎಫ್‌ಸಿ: 2022ದಿನಾಂಕ:16.05.2022 | | 250.00 | | | | | | |
| | **TOTAL** | | **6250.00** | **2858.84** | **2842.67** | **830** | **528** | **161** | **141** |

## 6) ಪೌರಕಾರ್ಮಿಕ ಗೃಹಭಾಗ್ಯ ಯೋಜನೆ:

ಮಂಗಳೂರು ಮಹಾನಗರ ಪಾಲಿಕೆಗೆ 143 ಮನೆಗಳು ನಿರ್ಮಾಣಕ್ಕೆ ಅನುಮೋದನೆಗೊಂಡಿರುತ್ತದೆ. ಈ ಪೈಕಿ 49 ಮನೆಗಳು ಪೂರ್ಣಗೊಂಡಿದ್ದು 35 ಮನೆಗಳ ನಿರ್ಮಾಣ ಪ್ರಗತಿಯಲ್ಲಿರುತ್ತವೆ ಹಾಗೂ ಬಾಕಿ 59 ಮನೆ ಪ್ರಾರಂಭವಾಗಬೇಕಿರುತ್ತದೆ ಈವರೆವಿಗೂ ರೂ.413.60 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಸಂಖ್ಯೆ:ನಅಇ 43 ಎಲ್‌ಸಿಕ್ಯೂ 2024

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು